
ಮೊಗಳ್ಳಿ ಗಣೇಶ್



# ಒಂದು ನೀಳ ಕೂದಲು

ದೂರದ ಪಯಣ ಮುಗಿಸಿ ಬಂದು ಆ ಮಾಯಾ ನಗರಿಯ ಲಾಡ್ಜಿನ ಕೊಠಡಿಯಲ್ಲಿ ಆತ ಅಂಗಾತ ಮಲಗಿ ಮಗ್ಗಲು ಬದಲಿಸಿ ಎದೆ ಮೇಲೆ ಕೈಯಾಡಿಸಿಕೊಂಡ. ಏನೋ ಬೆರಳಿಗೆ ನುಲಿದುಕೊಂಡಿತು. ಅದು ಒಂದು ನೀಳ ಕೂದಲು. ಅವನ ಎದೆಯ ಮೇಲೆಯೇ ಮಲಗಿ ಆಗ ತಾನೆ ಎದ್ದು ನಿಟ್ಟುಸಿರು ಬಿಟ್ಟಂತಿತ್ತು. ಉದ್ದನೆಯ ಗುಂಗುರು ಕೂದಲು. ಲಂಬಿಸಿ ನೋಡಿದ. ಅವನ ಮುಂದೆ ಎತ್ತರದ ಚೆಲುವೆ ಬಂದು ನಿಂತಂತಾಯಿತು. ಕೂದಲನ್ನೇ ದಿಟ್ಟಿಸಿ ನೋಡಿದ. ಯಾವ ಚೆಲುವೆಯ ಕೂದಲೊ, ಯಾವ ಸೀಮೆಯವಳೊ... ಹೀಗೆ ಈ ರಾತ್ರಿಯಲಿ ನನ್ನೆದೆ ಮೇಲೆ ಹೇಗೆ ಬಂದು ಕೂತಳೊ... ಪ್ರಿಯಕರನ ಅಪ್ಪುಗೆಯಲ್ಲಿ ಬಾಡಿದ್ದಳೇನೋ ? ಯಾರವಳು ಈ ನೀಳ ಕೂದಲು ಚೆಲುವೆ ? ಯಾವ ದೇವಗನ್ನೆಯೊ ಇಲ್ಲವೇ ಮಾರಾಟದ ಹೆಣ್ಣೋ... ಈ ಕೂದಲ ಗುರುತ ಬಿಟ್ಟು ಈಗ ಎಲ್ಲಿ ಹೋಗಿರುವಳೊ ಎಂದು ಇಡೀ ರಾತ್ರಿ ಕೂದಲ ಜೊತೆ ಮಾತನಾಡಿದ. ಚಡಪಡಿಸಿ ಹೊರಳಾಡಿದ. ಅರೆನಿದ್ದೆ ಅರೆ ಎಚ್ಚರಗಳು ದೂರದೂರುಗಳ ಪಯಣದ ದಾರಿಗಳು ಎದ್ದೇಳು ಹೊತ್ತಾಯಿತು ಎಂದು ಎಚ್ಚರಿಸುತ್ತಿದ್ದವು.